December 2021
ವಿತ್ತಸಂಚಿಕೆ

# INSPIRE INDIA

ಸಲಹೆ ನಮ್ಮದು ಹೂಡಿಕೆ ನಿಮ್ಮದು



ಶರಣ್ ಪಾಟೀಲ್
ಆರ್ಥಿಕ ತಜ್ಞ

**INSPIRE INDIA WEALTH PRIVATE LTD.,** @ 65, 'Surasa Enclave' 1st Floor, Puttanna Road, Gandhi Bazar Basavanagudi, Bengaluru-560004, Ph: +91 8042129917, 9035414414. **Mail:** info@inspireindiafs.com **Website:** www.inspireindiafs.com



"ವಂಚಕರ ದಾಳಿ ಮತ್ತು ಸುಲಿಗೆಕೋರ ಸೈಬರ್ ದಾಳಿಗಳಂತಹ ಘಟನೆಗಳಿಂದ ಸಂಭವಿಸಿದ ನಷ್ಟಗಳು ಸೈಬರ್ ಕ್ರೈಮ್‌ನ ಮೌಲ್ಯ ಮತ್ತು ಅಗತ್ಯವನ್ನು ತಿಳಿಸುತ್ತವೆ.

–ಡಾ.ಕ್ಯಾಥರೀನಾ ರಿಚರ್



"ಯಾವತ್ತೂ ಒಂದೇ ಒಂದು ಆದಾಯವನ್ನು ನಂಬಿಕೊಂಡು ಕುಳಿತುಕೊಳ್ಳಬಾರದು. ಎರಡನೇ ಆದಾಯ ಮೂಲವನ್ನು ಸೃಷ್ಟಿಸಲು ಹೂಡಿಕೆಯನ್ನು ಮಾಡುತ್ತಿರಿ.

–ವಾರೆನ್ ಬಫೆಟ್



"ಒಂದು ಹೂಡಿಕೆ ಕಂಪನಿಯು ಜಾಹೀರಾತಿನ ಮೇಲೆ ಭಾರೀ ಹಣವನ್ನು ಸುರಿಯುತ್ತಿದ್ದರೆ ಅಂತಹ ಕಂಪನಿಯ ಮೇಲೆ ಹೂಡಿಕೆ ಮಾಡುವುದು ಅಷ್ಟೇನೂ ಔಚಿತ್ಯಪೂರ್ಣವಲ್ಲ.

–ರಾಬರ್ಟ್ ಕಿಯೋಸ್ಕಿ

# ನಿಯಮದ ಅಡಿಗಲ್ಲಿನ ಮೇಲೆ ಹೂಡಿಕೆ ಸೌಧ




**ಕ**ಳೆದ ಅನೇಕ ದಶಕಗಳ ಹೂಡಿಕೆ ಜಗತ್ತನ್ನು ಒಮ್ಮೆ ಹಿಂದಿರುಗಿ ನೋಡಿದಾಗ ನಮಗೆ ಅಲ್ಲಿ ಕಾಣುವುದು ಸಕ್ರಿಯ ಮತ್ತು ನಿಷ್ಕ್ರಿಯ ಫಂಡ್‌ಗಳ ಒಟ್ಟು ಗುಚ್ಛಗಳು. ಈ ಹೊತ್ತಿಗೆ ಈ ಎರಡು ರೀತಿಯ ಬಂಡವಾಳ ಪಟ್ಟಿಯ ನಿರ್ವಹಣೆ ನಮಗೆ ಪರಿಚಯವಾಗಿರುತ್ತದೆ. ಈಗಿನ್ನೂ ಆರಂಭ ಮಾಡದೇ ಇದ್ದವರಿಗೆ ಸಕ್ರಿಯ ಫಂಡ್‌ಗಳು ಅತಿ ಹೆಚ್ಚು ಆದಾಯವನ್ನು ತಂದುಕೊಡುತ್ತದೆ. ಸಕ್ರಿಯವಾದ ಷೇರು ಆಯ್ಕೆಯ ಆಧಾರದಲ್ಲಿ ನಡೆಯುವ ಈ ಪ್ರಕ್ರಿಯೆಗಳು ಸಲ್ಪ ಹೆಚ್ಚೇ ಅನ್ನುವಷ್ಟು ವೆಚ್ಚವನ್ನು ಹೊಂದಿರುತ್ತದೆ ಮತ್ತು ಸಂಕೀರ್ಣತೆಯೂ ಕೂಡ. ಇದಕ್ಕೆ ಸಂಪೂರ್ಣ ತದ್ವಿರುದ್ಧವಾದುದು ನಿಷ್ಕ್ರಿಯ ಫಂಡ್‌ಗಳು. ಇವು ಸೂಚ್ಯಂಕದ ಒಂದು ಛಾಯೆ. ಇದರಲ್ಲಿ ಬಂಡವಾಳಕಾರರು ಅತ್ಯಂತ ಪಾರದರ್ಶಕವಾದ ಮತ್ತು ಪರಿಣಾಮಕಾರಿಯಾದ ವೆಚ್ಚವನ್ನು ಒಳಗೊಂಡ ಮಾರುಕಟ್ಟೆ ಬಂಡವಾಳ ಪಟ್ಟಿಯ ಅನುಭವವನ್ನು ಪಡೆಯಬಹುದು. ಮಾರುಕಟ್ಟೆ ಅತಿಯಾದ ನಿರ್ವಹಣೆ ತೋರುತ್ತದೆ ಎಂಬ ಭರವಸೆಯೇನೂ ಇರುವುದಿಲ್ಲ.

ಬಹಳ ಸುದೀರ್ಘ ಕಾಲದಿಂದ ಭಾರತದ ಮಾರುಕಟ್ಟೆಯ ಮೇಲೆ ಪ್ರಾಬಲ್ಯ ಸಾಧಿಸಿದ್ದು ಈ ಸಕ್ರಿಯ ಫಂಡ್‌ಗಳು. ಬಹುಷಃ ಈಗಿನ ಟ್ರೆಂಡ್ ನೋಡಿದರೆ ಇದು ಇನ್ನೂ ಹಲವು ವರ್ಷಗಳ ಮುಂದುವರಿಯುವ ಲಕ್ಷಣಗಳು ಕಾಣಿಸುತ್ತಿವೆ. ಇತ್ತೀಚಿನ ವರ್ಷಗಳಲ್ಲಿ ನಿಷ್ಕ್ರಿಯ ಫಂಡ್‌ಗಳ ಅಸ್ತಿತ್ವ ಕೂಡ ಭಾರತದ ಮಾರುಕಟ್ಟೆಯಲ್ಲಿ ಕಾಣಿಸಿಕೊಳ್ಳಲು ಆರಂಭಿಸಿದೆ. ಮ್ಯೂಚುಯಲ್ ಫಂಡ್ ವಲಯದಲ್ಲಿ ಸರಿಸುಮಾರು ಶೇ.10ರಷ್ಟು ಸಣ್ಣ ಪ್ರಮಾಣದಲ್ಲಿ ಇದರ ಇರವು ಕಾಣಿಸುತ್ತಿದೆ. ತ್ವರಿತಗತಿಯ ತಂತ್ರಜ್ಞಾನದ ಪ್ರಗತಿ ಮತ್ತು ಆವಿಷ್ಕಾರದೊಂದಿಗೆ ನಾವೀಗ ಬಂಡವಾಳ ಪಟ್ಟಿಯ ನಿರ್ಮಾಣಕ್ಕೆ ಹೊಸ ವಿಧಾನವನ್ನು ಕಾಣುತ್ತಿದ್ದೇವೆ. ಅದು, ಭಾರತದಲ್ಲಿ ನಿಯಮ ಆಧಾರಿತ ಸಕ್ರಿಯ ಹೂಡಿಕೆ. ಈ ಹೊಸ ವಿಧಾನವು ಎರಡೂ ಕ್ಷೇತ್ರಗಳ ಅತ್ಯುತ್ತಮ ಸಂಗತಿಗಳನ್ನು ತೊಡಗಿಸಿಕೊಳ್ಳಲಿದೆ. ಈ ಲೇಖನದಲ್ಲಿ ನಾವು ಹೂಡಿಕೆಯ ಹೊಸ ಶೈಲಿಯನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡೋಣ.




**ನಿಯಮ ಆಧಾರಿತ ಸಕ್ರಿಯ ಹೂಡಿಕೆ:** ನಿಯಮ ಆಧಾರಿತ ಸಕ್ರಿಯ ಹೂಡಿಕೆಯು ಸಕ್ರಿಯ ಹಾಗೂ ನಿಷ್ಕ್ರಿಯ ಹೂಡಿಕೆಯ ಎರಡೂ ತೀವ್ರ ಸ್ವರೂಪದ ವಿಧಾನಗಳ ಲಾಭಗಳನ್ನು ಸೆಳೆದುಕೊಳ್ಳುವ ಪ್ರಯತ್ನವಾಗಿದೆ. ಇದರ ಮೂಲ ಚಿಂತನೆ ಏನೆಂದರೆ ಸಕ್ರಿಯವಾದ ಕಾರ್ಯತಂತ್ರಗಳನ್ನು ಜಾರಿಗೆ ತರುವುದು. ಈ ಕಾರ್ಯತಂತ್ರಗಳು ಯಾವತ್ತೂ ನಿಯಮಗಳು ಅಥವಾ ಮಾದರಿಗಳನ್ನು ಆಧರಿಸಿದ್ದಾಗಿರುತ್ತವೆ. ಇದರಿಂದಾಗಿ ಷೇರು ಆಯ್ಕೆಯಲ್ಲಿ ಮನುಷ್ಯನ ಮಧ್ಯಪ್ರವೇಶ ಇರುವುದಿಲ್ಲ. ಇಡೀ ಪ್ರಕ್ರಿಯೆಯು ಸ್ವಯಂಚಾಲಿತವಾಗಿ ನಡೆಯುವ ಕಾರಣದಿಂದಾಗಿ ಯಾವುದೇ ಪೂರ್ವಗ್ರಹ, ಲೋಪ–ದೋಷಗಳಿಗೆ ಅವಕಾಶ ಇರುವುದಿಲ್ಲ. ವೈವಿಧ್ಯತೆಯನ್ನು ಹೆಚ್ಚಿಸುವುದು ಮಾತ್ರವಲ್ಲದ ಮೌಲ್ಯಮಾಪನದ ದೃಷ್ಟಿಯಿಂದ ಷೇರಿನ ಸಾರ್ವಕಾಲಿಕತೆಯನ್ನು ಹೆಚ್ಚಿಸುತ್ತದೆ. ಈ ನಿಯಮಗಳು ಮತ್ತು ಮಾದರಿಗಳು ಯಾವತ್ತೂ ಇನ್–ಹೌಸ್‌ನಲ್ಲಿ ವಿನ್ಯಾಸಗೊಂಡವು ಹಾಗೂ ಇವು ಯಾವತ್ತೂ ಪಾರದರ್ಶಕ, ವ್ಯವಸ್ಥಿತ ಹಾಗೂ ತಕ್ಕಮಟ್ಟಿಗೆ ಕಡಿಮೆ ವೆಚ್ಚದಲ್ಲಿ ನಡೆಯುತ್ತವೆ.

ಈ ನಿಯಮ ಆಧಾರಿತ ಹೂಡಿಕೆ ಯಾವತ್ತೂ ದತ್ತಾಂಶವನ್ನು ಅವಲಂಬಿಸಿರುತ್ತದೆ ಮತ್ತು ಹಣಕಾಸು ದತ್ತಾಂಶದ ತಜ್ಞತೆಯನ್ನು ಬಳಸಿಕೊಳ್ಳುತ್ತದೆ. ಸಾಂಪ್ರದಾಯಿಕವಾಗಿ ಫಂಡ್ ನಿರ್ವಾಹಕರನ್ನೇ ಸಂಪೂರ್ಣ ನಂಬಿಕೊಂಡಿರುವುದಿಲ್ಲ. ಇಂದು ಬೃಹತ್ ಪ್ರಮಾಣದಲ್ಲಿ ದತ್ತಾಂಶಗಳು ಲಭ್ಯವಿರುವುದರಿಂದ ಒಂದು ಶಿಸ್ತುಬದ್ಧ ರೀತಿಯಲ್ಲಿ ನಿಯಮಗಳನ್ನು ಗುರುತಿಸುವುದು, ಅವುಗಳನ್ನು ಸಿಂಧುತ್ವಗೊಳಿಸುವುದು ಮತ್ತು ಜಾರಿಗೆ ತರುವಂತೆ ತಂತ್ರಜ್ಞಾನವನ್ನು ಸಿದ್ಧಗೊಳಿಸಬಹುದು. ಇವೆಲ್ಲದರ ಪರಿಣಾಮವಾಗಿ ನಿಯಮ ಆಧಾರಿತ ಸಕ್ರಿಯ ಹೂಡಿಕೆ ತಂತ್ರಗಾರಿಕೆಗಳು ಇಂದು ಹೆಚ್ಚು ಆಧುನಿಕ ಮತ್ತು ನಿಖರವಾಗಿವೆ.

ನಿಯಮ ಆಧಾರಿತ ಹೂಡಿಕೆಯೊಳಗೇ ಇರುವ ಅತ್ಯಂತ ಜನಪ್ರಿಯ ಕಾರ್ಯತಂತ್ರಗಳಲ್ಲಿ ಒಂದೆಂದ–ರೆ ವಿಷಯ–ಆಧಾರಿತ ಹೂಡಿಕೆ. ಇದು ನಿರ್ವಹಣೆಯ ಮೇಲೆ ಸಕಾರಾತ್ಮಕವಾಗಿ ಪ್ರಭಾವವನ್ನು ಬೀರುವ ಕೆಲವು ಅಪೇಕ್ಷಿತ ಗುಣಗಳನ್ನು ಹೊಂದಿದ ಷೇರುಗಳನ್ನು ಆಯ್ಕೆ ಮಾಡುತ್ತದೆ. ಸಮಯದ

ಅಗ್ನಿಪರೀಕ್ಷೆಗೆ ಒಳಪಟ್ಟ ಈ ವಿಷಯಗಳನ್ನು ಷೇರುಗಳ ಗುರುತಿಸುವಿಕೆಗೆ ಬಳಸಿಕೊಳ್ಳುವುದು ಈ ಯೋಚನೆಯ ಹಿಂದಿನ ಉದ್ದೇಶ. ಈ ಷೇರುಗಳು ಅತ್ಯುತ್ತಮವಾದ ಆದಾಯಗಳನ್ನು ತರಬಲ್ಲ ಮತ್ತು ಅಪಾಯಕಾರಿ ಅಂಶಗಳನ್ನು ತೊಡೆದುಹಾಕಬಲ್ಲ ಸಾಮರ್ಥ್ಯವನ್ನು ಹೊಂದಿದವು. ಆಸಕ್ತಿಯ ವಿಷಯ ಏನೆಂದರೆ ಕೇವಲ ಷೇರನ್ನು ಆಯ್ಕೆ ಮಾಡುವುದನ್ನು ಮಾತ್ರವಲ್ಲದೆ ಅದಕ್ಕೂ ಮೀರಿದ ಕೆಲಸವನ್ನು ಮಾಡುವ ಉತ್ಪನ್ನಗಳನ್ನು ನಾವು ಈಗ ಹೊಂದಿದಂತಾಗಿದೆ. ಅಷ್ಟು ಮಾತ್ರವಲ್ಲದೆ ಆಸ್ತಿ ಹಂಚಿಕೆಯನ್ನು ನಿರ್ಧರಿಸಲು ನಿಯಮಗಳು/ ಮಾದರಿಗಳನ್ನು ಕೂಡ ನಿಯೋಜಿಸುತ್ತವೆ; ಏಕೈಕ ಫಂಡ್‌ನ ವ್ಯಾಪ್ತಿಯಲ್ಲಿಯೇ ಈಕ್ವಿಟಿ ಮತ್ತು ಸಾಲದ ನಡುವೆ ನಡೆಯುವ ಹಂಚಿಕೆ. ಹಾಗಾಗಿ ಈ ಫಂಡ್‌ಗಳು ಎರಡು ವಿಷಯಗಳನ್ನು ನಿರ್ಧರಿಸಲು ನಿಯಮಗಳನ್ನು ದುಡಿಸಿಕೊಳ್ಳುತ್ತವೆ– ಅವುಗಳೆಂದರೆ (1) ಆಸ್ತಿ ಹಂಚಿಕೆ (2) ಷೇರು ಆಯ್ಕೆ.

**ಘಟಕಾಂಶಗಳು:** ಯಾವುದೇ ನಿಯಮ–ಆಧಾರಿತ ಹೂಡಿಕೆಯ ಕಾರ್ಯತಂತ್ರದಲ್ಲಿ ಘಟಕಾಂಶಗಳು ಅತ್ಯಂತ ಪ್ರಮುಖ ಸಂಗತಿಗಳಾಗಿವೆ. ಈ ಘಟಕಾಂಶಗಳನ್ನು ವಿಶಾಲ ಅರ್ಥವ್ಯಾಪ್ತಿಯಲ್ಲಿ ಮಾನದಂಡಗಳು ಅಥವಾ ವಿಚಾರಣಾ ಹಂತಗಳು ಎಂದು ಕರೆಯಬಹುದು. ಇವುಗಳ ಆಧಾರದಲ್ಲಿಯೇ ಯಾವುದೇ ನಿರ್ಧಾರ ಕೈಗೊಳ್ಳಲಾಗುತ್ತದೆ ಅಥವಾ ಫಲಿತಾಂಶ ಲಭ್ಯವಾಗುತ್ತದೆ. ಷೇರುಗಳನ್ನು ಆಯ್ಕೆ ಮಾಡಲು ಚಂಚಲತೆ ಮತ್ತು ಚಲನಗತಿಯಂತಹ ಮಾರುಕಟ್ಟೆ ಅಂಶಗಳು ಹಾಗೂ ಷೇರುಗಳ ಮೂಲಭೂತ ಸಂಗತಿಗಳ ಮೌಲ್ಯ ಮತ್ತು ಗುಣಮಟ್ಟ




ಮೌಲ್ಯಮಾಪನವನ್ನು ಬಳಸಲಾಗುತ್ತದೆ. ಇದರ ಜೊತೆಗೆ ಆಸ್ತಿ ಹಂಚಿಕೆ ಕಾರ್ಯತಂತ್ರವನ್ನು ಹೊಂದಿದ ಫಂಡ್‌ಗಳಿಗೆ, ಅರ್ಥ ವ್ಯವಸ್ಥೆಯನ್ನು ಮೌಲ್ಯಮಾಪನ ಮಾಡುವ ಅಂಶಗಳು ಮತ್ತು ಈಕ್ವಿಟಿ ಮಾರುಕಟ್ಟೆ ಸೂಚಕರನ್ನು ಈಕ್ವಿಟಿ ಹಾಗೂ ಸಾಲದ ನಡುವಿನ ಹಂಚಿಕೆಯನ್ನು ನಿರ್ಧರಿಸಲು ಬಳಸುತ್ತಾರೆ. ಉದಾಹರಣೆಗೆ, ಈಕ್ವಿಟಿ ಮೌಲ್ಯಮಾಪನಗಳು, ಬಡ್ಡಿ ದರಗಳು ಮತ್ತು ಸರ್ಕಾರಿ ಸೆಕ್ಯುರಿಟಿ ಗಳಿಕೆಗಳು. ಇಂತಹ ಫಂಡ್‌ಗಳಲ್ಲಿ ಎರಡೂ ರೀತಿಯ ಅಂಶಗಳು ಜೊತೆಯಾಗಿಯೇ ಈಕ್ವಿಟಿಗೆ ತೆರೆದುಕೊಳ್ಳುವ ಅವಕಾಶವನ್ನು ಒದಗಿಸುತ್ತವೆ. ಇದರಿಂದ ಇಂತಹ ಫಂಡ್‌ಗಳಲ್ಲಿ ಹೂಡಿಕೆ ಮಾಡಿದ ಹೂಡಿಕೆದಾರರು ಹೂಡಿಕೆಗಳಲ್ಲಿ ಏರುಪೇರುಗಳಾಗುವುದನ್ನು ತಗ್ಗಿಸಬಹುದು.

ಒಂದು ನೋಟಕ್ಕೆ ಇದು ಸರಳವಾಗಿ ಕಾಣುತ್ತದೆಯಾದರೂ, ಇಲ್ಲಿನ ಪ್ರತಿಯೊಂದು ಘಟಕಾಂಶಗಳಲ್ಲಿ ಬಹುಕ್ರಮಗಳು, ಸೂಚಕಗಳನ್ನು ಕೂಡ ಬಳಸಬಹುದು. ಇದಕ್ಕೆ ಪೂರಕವಾದ ಸಾಧನಗಳು ಮತ್ತು ಘಟಕಾಂಶಗಳನ್ನು ರೂಪಿಸಲು ಸಾಕಷ್ಟು ಸಮಯವನ್ನೇ ವಿನಿಯೋಗಿಸಬೇಕಾಗುತ್ತದೆ. ಅತ್ಯಂತ ಕಡಿಮೆ ರಿಸ್ಕ್‌ಗಳಲ್ಲಿ ಭರಪೂರ ಲಾಭಗಳ ಭರವಸೆಯನ್ನು ನೀಡಲು ಅನೇಕ ರೀತಿಯ ಅನುಕರಣೆ, ಅವಲಂಬನೆ, ಮರುಪರಿಶೀಲನೆಗಳನ್ನು ಮಾಡಬೇಕಾಗುತ್ತದೆ. ಮಾರುಕಟ್ಟೆಯ ನಾನಾ ವಿದ್ಯಮಾನಗಳಿಗಾಗಿ ಐತಿಹಾಸಿಕ ದತ್ತಾಂಶಗಳೊಂದಿಗೆ ನಿಯಮಗಳು/ಮಾದರಿಗಳನ್ನು ಮುಂಚಿತವಾಗಿಯೇ ಪಲ್ಲಟಗಳು ಮತ್ತು ನಿರ್ವಹಣೆಗಾಗಿ ಪೂರ್ವ–ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಆಸ್ತಿ ಹಂಚಿಕೆ, ಷೇರು ಮೌಲ್ಯ ಮತ್ತು ಘಟಕಾಂಶಗಳ ನಡುವಿನ ಪ್ರಾಮುಖ್ಯತೆಯನ್ನು ಕೂಡ ಮಾಲೀಕತ್ವದ ಶಿಷ್ಟಾಚಾರದ ಆಧಾರದಲ್ಲಿ ನಿರ್ಧರಿಸಲಾಗುತ್ತದೆ. ಈ ಮಾಲೀಕತ್ವದ ತರ್ಕ ಮತ್ತು ದಕ್ಷತೆಗೆ ಅಪಾರ ಮೌಲ್ಯಗಳಿದ್ದು, ಮಾದರಿ/ನಿಯಮ ಆಧಾರಿತ ಫಂಡ್‌ಗಳು ಮಾತ್ರ ಅವುಗಳನ್ನು ಪ್ರತ್ಯೇಕಿಸಬಹುದಾಗಿವೆ. ಇವೆಲ್ಲವೂ ಪ್ರಧಾನವಾಗಿ ಸಕ್ರಿಯ ವಿಧಾನದಿಂದ ಮಾತ್ರವಲ್ಲದೆ ಇವತ್ತಿನ ಬಹುತೇಕ ಮ್ಯುಚುಯಲ್ ಫಂಡ್‌ಗಳ ನಿಷ್ಕ್ರಿಯ ಪುನರಾವರ್ತನೆಯ ಕಾರ್ಯತಂತ್ರಗಳಿಂದ ನಿಯಮ ಆಧಾರಿತ ಸಕ್ರಿಯ ಫಂಡ್‌ಗಳನ್ನು ಅತ್ಯಂತ ಸ್ಪಷ್ಟವಾಗಿ ಪ್ರತ್ಯೇಕಗೊಳಿಸುತ್ತದೆ.




# ನಿಯಮವಿದ್ದರೆ ಸಕ್ರಿಯ ಹೂಡಿಕೆ ಬಲು ಲೇಸು




ನಿಯಮ ಆಧಾರಿತ ಸಕ್ರಿಯ ಹೂಡಿಕೆ ಕಾರ್ಯತಂತ್ರವು ಎರಡೂ ವಿಧಾನಗಳಲ್ಲಿ ಉತ್ತಮವಾದುದನ್ನೇ ನೀಡುವ ಪ್ರಯತ್ನಗಳನ್ನು ಮಾಡುತ್ತದೆ. ನಿಯಮಗಳನ್ನೂ ಬಿಡದೆ ಸಕ್ರಿಯ ಷೇರು ಆಯ್ಕೆಯ ಮೂಲಕ ಉತ್ತಮ ಕಾರ್ಯನಿರ್ವಹಣೆ ಇದರ ಉದ್ದೇಶವಾಗಿರುತ್ತದೆ. ಇದಲ್ಲದೆ, ನಿಯಮಗಳನ್ನು ಆಧರಿಸಿದ ಷೇರುಗಳ ಆಯ್ಕೆಯಿಂದ ಅದರ ಮೌಲ್ಯಮಾಪನ ಕೂಡ ಯಾವುದೇ ನಿರ್ಬಂಧವಿಲ್ಲದೇ ನಡೆ–ಯುತ್ತ ಹೋಗುತ್ತದೆ. ಯಾಕೆಂದರೆ ಇದೊಂದು ಸ್ವಯಂಚಾಲಿತ ಪ್ರಕ್ರಿಯೆ. ಇದು ಮನುಷ್ಯ ನಡೆಸುವ ಸಂಶೋಧನೆ/ವಿಷಯ ಸಂಗ್ರಹಣೆ, ಅವಕಾಶಗಳನ್ನು ಗುರುತಿಸುವ ಭರವಸೆಯನ್ನು ಅವಲಂಬಿಸಿರುವುದಿಲ್ಲ. ಚಲನಶೀಲವಾದ ಆಸ್ತಿ ಹಂಚಿಕೆ ವಿಧಾನವನ್ನು ಒಳಗೊಂಡ ಫಂಡ್‌ಗಳು ಕೂಡ ನಿಯಮದ ಆಧಾರದಲ್ಲಿಯೇ ಆಸ್ತಿ ಹಂಚಿಕೆ ಮತ್ತು ಷೇರು ಆಯ್ಕೆಯ ಭರವಸೆಯನ್ನು ನೀಡುತ್ತವೆ. ಇಲ್ಲಿಯೂ ಮಾನವನ ಯಾವುದೇ ಮಧ್ಯಪ್ರವೇಶ ಇರುವುದಿಲ್ಲ. ಇದರಿಂದಾಗಿ ಇಡೀ ಪ್ರಕ್ರಿಯೆಯು ಅತ್ಯಂತ ಶಿಸ್ತುಬದ್ಧವಾಗಿ ನಡೆಯುತ್ತದೆ. ಯಾವುದೇ ವ್ಯಕ್ತಿ ಪೂರ್ವಗ್ರಹಕ್ಕೆ ಒಳಗಾಗಿ ಷೇರುಗಳನ್ನು ಆಯ್ಕೆ ಮಾಡುವ ಸಂಭವಗಳು ಮತ್ತು ಕಣ್ತಪ್ಪಿನಿಂದ ಆಗುವ ತಪ್ಪಿಗೂ ಅವಕಾಶವಿರುವುದಿಲ್ಲ. ಈ ಪ್ರಕ್ರಿಯೆಯು ಪೂರ್ವನಿರ್ಧಾರಿತ ಮಧ್ಯಪ್ರವೇಶಿಕೆಯ ಮೂಲಕ ಪುನರಾವರ್ತನೆಯಾಗುವ ಕಾರಣ ಕಾಲಕ್ಕೆ ತಕ್ಕಂತೆ ಬಂಡವಾಳ ಪಟ್ಟಿ ಕೂಡ ಬದಲಾವಣೆ ಹೊಂದುವ ಅವಕಾಶವನ್ನು ಒದಗಿಸುತ್ತದೆ ಮತ್ತು ವೆಚ್ಚ ಕೂಡ ಕಡಿಮೆ.

ನಿಯಮ ಆಧಾರಿತ ಸಕ್ರಿಯ ಫಂಡ್‌ನಲ್ಲಿ ಹೂಡಿಕೆ: ಹೂಡಿಕೆದಾರರಾಗಿ ನಾವು ಆಗಾಗ ನಮ್ಮ ಬಂಡವಾಳ ಪಟ್ಟಿಯನ್ನು ಬಹುರೂಪದಲ್ಲಿ ಬಳಕೆ ಮಾಡುವ ದಾರಿಗಳ ಬಗ್ಗೆ ಮತ್ತು ರಿಸ್ಕ್‌ಗಳನ್ನು ತಗ್ಗಿಸುವ ಬಗ್ಗೆ ಯೋಚನೆ ಮಾಡುತ್ತಿರುತ್ತೇವೆ. ನಿಯಮಗಳನ್ನು ಆಧರಿಸಿದ ಫಂಡ್ ಇಂತಹ ಅವಕಾಶವನ್ನು ಮಾಡಿಕೊಡುತ್ತದೆ. ಈಕ್ವಿಟಿ ಮತ್ತು ಡೆಟ್ ನಡುವೆ ಆಸ್ತಿಯನ್ನು ಹಂಚಿಕೆ ಮಾಡುವ ಅವಕಾಶವನ್ನು ಒದಗಿಸುವ ಫಂಡ್ ತೆರಿಗೆ ದಕ್ಷತೆಯನ್ನೂ ಹೊಂದಿರುತ್ತದೆ. ಯಾಕೆಂದರೆ ಇಲ್ಲಿ ಹೂಡಿಕೆದಾರನು ಬಹು ಯೋಜನೆಗಳು/ಫಂಡ್‌ಗಳ ನಡುವೆ ಬಂಡವಾಳವನ್ನು ಹಂಚಿಕೆ ಮಾಡದೇ ನಿಭಾಯಿಸಲು ಸಾಧ್ಯವಿರುತ್ತದೆ. ಹಾಗಾಗಿ ಇದು ಅತ್ಯಂತ ಸುಲಭವಾಗಿ ನಿರ್ವಹಿಸುವಂತಹುದು.

ನಾವು ಯಾವುದೇ ಹೂಡಿಕೆ ನಿರ್ಧಾರವನ್ನು ಹೂಡಿಕೆದಾರನ ಅಗತ್ಯಗಳಿಗೆ ತಕ್ಕಂತೆ ಮತ್ತು ಆತ/ಆಕೆಯ ರಿಸ್ಕ್ ಪ್ರೊಫೈಲ್‌ಗೆ ಅನುಗುಣವಾಗಿ ಕೈಗೊಳ್ಳುತ್ತಿರುತ್ತೇವೆ. ಸಕ್ರಿಯ, ನಿಷ್ಕ್ರಿಯ ಅಥವಾ ನಿಯಮ ಆಧಾರಿತ ಸಕ್ರಿಯ ಫಂಡ್ ಇರಲಿ, ಯಾವುದೇ ವಿಧದ ಫಂಡ್‌ಗೆ ಅದರದ್ದೇ ಆದ ಅವಕಾಶ ಮತ್ತು ಹೂಡಿಕೆದಾರರು ಇದ್ದೇ ಇರುತ್ತಾ–ರೆ. ಒಬ್ಬ ಬುದ್ಧಿವಂತ ಹೂಡಿಕೆದಾರರಾಗಿ ನಮ್ಮ ಮುಂದೆ ಇರಬಹುದಾದ ಹೂಡಿಕೆ ಆಯ್ಕೆಗಳ ಬಗೆಗೆ ಅರಿವಿರಬೇಕು. ಜೊತೆಗೆ ಹೊಸ ಆವಿಷ್ಕಾರಗಳು ಮತ್ತು ಉತ್ಪನ್ನಗಳು ಇರುವುದರಿಂದ ನಮ್ಮ ಮುಂದೆ ಹೆಚ್ಚು ಹೆಚ್ಚು ಆಯ್ಕೆ ಮತ್ತು ವೈವಿಧ್ಯತೆಯ ಅವಕಾಶಗಳಿರುವ ಬಗ್ಗೆ ಸಂತೋಷಪಡಬೇಕಾಗಿದೆ. ಈ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಬಯಸಿದರೆ ನಿಮ್ಮ ಮ್ಯುಚುಯಲ್ ಫಂಡ್ ವಿತರಕರನ್ನು ಸಂಪರ್ಕಿಸಿ.

# ಕುಟುಂಬ–ಕಾನೂನಿನ ಸುರಕ್ಷಗೆ ಬೇಕು ವಿಲ್!



ನಮ್ಮ ಜೀವನ ಎಷ್ಟು ನಶ್ವರ! ಕೋವಿಡ್ ಪ್ಯಾಂಡಮಿಕ್ ಇಂತಹ ಒಂದು ಅರಿವನ್ನು ನಮ್ಮಲ್ಲಿ ಮೂಡಿಸುವಲ್ಲಿ ಯಶಸ್ವಿಯಾಗಿದೆ. ನಾವು ಎಂದೆಂದೂ ಕಲ್ಪಿಸಿಕೊಳ್ಳದೇ ಇರುವ ರೀತಿಯಲ್ಲಿ ಬದಲಾಗಿ ಹೋಗಿದ್ದೇವೆ. ಇಂತಹ ಅನಿಶ್ಚಿತತೆಯ ದಿನಗಳಲ್ಲಿ ಕೇವಲ ಆದಾಯ ಮಾತ್ರವಲ್ಲ, ನಮ್ಮ ಜೀವನದ ಬಗ್ಗೆ ಯೋಜನೆಗಳನ್ನು ರೂಪಿಸಬೇಕು ಎಂದು ಚಿಂತಿಸುವಂತೆ ಮಾಡಿದೆ. ನಮ್ಮ ಮುಂದಿನ ವಾರಸುದಾರರು ಯಾರು ಎಂದೂ ಅನೇಕರು ಯೋಚನೆ ಮಾಡಿದ್ದರಲ್ಲಿ ಅಚ್ಚರಿಯಿಲ್ಲ. ಅಷ್ಟು ಮಾತ್ರವಲ್ಲದೆ ಈ ಅವಧಿಯಲ್ಲಿ ವಿಲ್ ಬರೆಯುವ ಕೆಲಸ ಕೂಡ ಗಣನೀಯ ಪ್ರಮಾಣದಲ್ಲಿ ಹೆಚ್ಚಿದೆ ಎನ್ನುವುದು. ಇಂತಹ ಒಂದು ಸಾಂಕ್ರಾಮಿಕ ರೋಗ ಬಂದು ನಮ್ಮನ್ನು ಆದ್ಯಂತವಾಗಿ ನಡುಗಿಸಿದ್ದರಿಂದಲೇ ಒಂದು ವಿಲ್‌ನ್ನು ಮುಂಚಿತವಾಗಿ ಬರೆದಿಡಬೇಕು ಮತ್ತು ಅದನ್ನು ಈಗಿನ ಕಾಲಕ್ಕನುಗುಣವಾಗಿ ಪರಿಷ್ಕರಣೆ ಮಾಡಬೇಕು ಎಂಬ ಜಾಗೃತಿ ನಮ್ಮಲ್ಲಿ ಮೂಡಿದೆ. ಅದರ ಮಹತ್ವ ಏನು ಎಂಬುದು ನಮಗೆ ಗೊತ್ತಾಗಿದೆ. ಈ ಹಿನ್ನೆಲೆಯಲ್ಲಿ ವಿಲ್ ಬರೆಯುವುದರ ಮಹತ್ವ, ಅದರ ಪ್ರಯೋಜನಗಳ ಜೊತೆ ಜೊತೆಗೇ ಅದನ್ನು ಮಾಡದೇ ಇರುವುದರಿಂದ ಆಗುವ ಪರಿಣಾಮಗಳ ಬಗ್ಗೆಯೂ ಯೋಚನೆ ಮಾಡಬೇಕಾಗಿದೆ. ನಾವಿಲ್ಲಿ ಇದರ ಬಗ್ಗೆ ಹೆಚ್ಚು ತಾಂತ್ರಿಕವಾಗಿ ಅಥವಾ ಅದರ ಕಾನೂನಾತ್ಮಕ ವಿವರಗಳನ್ನು ನೋಡುವುದು ಬೇಡ. ಬದಲಾಗಿ, ಅದರ ಹಿನ್ನೆಲೆಯ ಬಗ್ಗೆ ಹೆಚ್ಚು ಗಮನ ಹರಿಸೋಣ ಮತ್ತು ಇನ್ನಷ್ಟು ತಿಳಿದುಕೊಳ್ಳುವ ಬಗ್ಗೆ ಉತ್ತೇಜನವನ್ನು ನೀಡೋಣ.

**ಯಾರು ವಿಲ್ ಹೊಂದಿರಬೇಕು?:** ನನಗೆ ವಿಲ್ ಮಾಡುವ ಅಗತ್ಯವಿದೆಯೇ ಇಲ್ಲವೇ ಎಂಬುದರ ಬಗ್ಗೆ ನೀವು ಯೋಚನೆ ಮಾಡುತ್ತಿದ್ದರೆ ಎರಡು ಬಹುಮುಖ್ಯ ಪ್ರಶ್ನೆಗಳನ್ನು ಕೇಳಿಕೊಳ್ಳಿ. – ನೀವು ಸ್ವಸ್ಥ ಮನಸ್ಸಿನ ವಯಸ್ಕರಾಗಿದ್ದೀರಾ? ಇದರ ಉತ್ತರ ಹೌದು ಎನ್ನುವುದಾದರೆ ನೀವು ವಿಲ್ ಬರೆಯಲು ಅರ್ಹರಾಗಿದ್ದೀರಿ ಎಂದೆ ಅರ್ಥ. ಅದಾದ ಬಳಿಕ ನೀವು ಈ ಕೆಳಗಿನ ಯಾವುದನ್ನಾದರೂ ಹೊಂದಿದ್ದೀರಾ ಎಂಬುದನ್ನು ಗಮನಿಸಿ:

- **ಉಳಿತಾಯ, ಹೂಡಿಕೆ, ಬ್ಯಾಂಕ್ ಖಾತೆಗಳು ಇತ್ಯಾದಿ.**
- **ಸ್ವಂತ ವ್ಯಾಪಾರ/ ವ್ಯಾಪಾರದಲ್ಲಿನ ಪಾಲು**
- **ಸ್ವಂತ ಆಸ್ತಿ, ಚರ ಅಥವಾ ಸ್ಥಿರ ಆಸ್ತಿಗಳು, ಆಭರಣಗಳು ಇತ್ಯಾದಿ.**
- **ವಿಮಾ ಪಾಲಿಸಿ.**
- **ಮಕ್ಕಳು**
- **ಅವಲಂಬಿತ ಪಾಲಕರು, ಸಂಬಂಧಿಗಳು/ಒಡಹುಟ್ಟಿದವರು ಇತ್ಯಾದಿ.**


ಈ ಮೇಲಿನ ಯಾವುದಾದರೂ ಒಂದಕ್ಕೆ ಉತ್ತರ ಹೌದು ಎನ್ನುವುದಾದರೆ ನೀವು ಅಗತ್ಯವಾಗಿ ವಿಲ್‌ನ್ನು ಮಾಡಿಸಲೇಬೇಕು.

ವಿಲ್ ಬರೆಯುವ ವಿಚಾರದಲ್ಲಿ ನಮಗೆ ಯಾವತ್ತೂ ಒಂದು ಕಟ್ಟುಕಥೆ ಇದೆ. ಅದೇನೆಂದರೆ ಕೇವಲ ಸಿರಿವಂತರು ಅಥವಾ ಬೃಹತ್ ಆಸ್ತಿ ಅಥವಾ ಉದ್ಯಮವನ್ನು ಹೊಂದಿರುವವರು ಮಾತ್ರ ವಿಲ್ ಮಾಡಿಸಬೇಕು ಎಂಬುದು. ಇಂತಹುದೊಂದು ಯೋಚನೆ ಸಂಪೂರ್ಣವಾಗಿ ತಪ್ಪು. ವಾಸ್ತವವಾಗಿ ಉಳಿತಾಯ ಅಥವಾ ಸಂಪತ್ತಿನ ಪ್ರಮಾಣ ಎಷ್ಟೇ ಇದ್ದರೂ ಕೂಡ ಆ ವ್ಯಕ್ತಿಯು ವಿಲ್ ಬರೆಸಬೇಕು. ವಿಲ್ ಬರವಣಿಗೆಯಲ್ಲಿ ಸಂಪತ್ತು ಮತ್ತು ಉಳಿತಾಯವೊಂದೇ ಮಾನದಂಡವಾಗುವುದಿಲ್ಲ. ನಾವು ಮೇಲೆ ಪ್ರಸ್ತಾಪ ಮಾಡಿದ ಯಾವುದನ್ನೂ ಹೊಂದಿಲ್ಲದೆ ನಿಮಗೆ ಯಾವುದಾದರೂ ಬಯಕೆಗಳಿದ್ದರೆ, ನೀವು ಯಾರಿಗಾದರೂ ಹಣವನ್ನು ಕೊಡಬೇಕಾಗಿದ್ದರೆ, ತಮ್ಮ ಅಂತ್ಯಸಂಸ್ಕಾರವನ್ನು ಹೇಗೆ ನಡೆಸಬೇಕು ಎನ್ನುವ ಅಂತಿಮ ಆಸೆ ಏನಾದರೂ ನಿಮಗೆ ಇದ್ದರೆ ಅಂತವುಗಳನ್ನು ದಾಖಲಿಸಲು 'ವಿಲ್' ಸೂಕ್ತವಾದ ಮಾರ್ಗವಾಗಿದೆ. ಇದಲ್ಲದೆ ಇನ್ನೂ ಒಂದು ತಪ್ಪು ಕಲ್ಪನೆ ಇದೆ; ನಾಮಿನಿಗಳನ್ನು ನೇಮಕ ಮಾಡಿದರೆ ಸಾಕು, ಯಾವುದೇ ವಿಲ್ ಮಾಡಬೇಕಾದ ಅಗತ್ಯವಿರುವುದಿಲ್ಲ ಎಂಬುದು. ಈ ಹಿನ್ನೆಲೆಯಲ್ಲಿ ದಯವಿಟ್ಟು ತಿಳಿದುಕೊಳ್ಳಬೇಕಾದ ಅಂಶ ಏನೆಂದರೆ ಬಹುತೇಕ ಪ್ರಕರಣಗಳಲ್ಲಿ, ನಾಮಿನಿಗಳು ಕೇವಲ ಟ್ರಸ್ಟಿಗಳಾಗಿರುತ್ತಾರೆ, ಆಸ್ತಿಗಳ ಉಸ್ತುವಾರಿ ಹೊಂದಿದವರು ಕಾನೂನುಬದ್ಧ ವಾರಸುದಾರರಿಗೆ ಹಂಚಿಕೆ ಮಾಡುತ್ತಾರೆ– ಅದು ವಿಲ್‌ನಲ್ಲಿ ಇದ್ದವರನ್ನು ಅಥವಾ ಕಾನೂನು ಪ್ರಕಾರ ಆಯ್ಕೆ ಮಾಡಬಹುದು. ಅವರು ಮೊತ್ತವನ್ನು/ಆಸ್ತಿಯನ್ನು ಪಡೆಯುವ ಅರ್ಹತೆಯನ್ನು ಮಾತ್ರ ಹೊಂದಿರಬಹುದು ಆದರೆ ಅದನ್ನು ಹೊಂದುವ ಅಥವಾ ಮಾಲೀಕತ್ವವನ್ನು ಪಡೆಯುವ ಅರ್ಹತೆಯನ್ನು ಹೊಂದಿರುವುದಿಲ್ಲ.




**ಏನು 'ವಿಲ್' ಎಂದರೆ?:** ವಿಲ್ ಅಥವಾ 'ವಸಿಯತ್' ಅಥವಾ 'ಉಯಿಲು' ಅಥವಾ 'ಮರಣಶಾಸನ' ಎಂದು ಕರೆಯಲ್ಪಡುವ ಇದು ಒಬ್ಬ ವ್ಯಕ್ತಿಯು ತನ್ನ ಸಾವಿಗೂ ಮುಂಚೆ ತನ್ನ ಕೊನೆಯ ಆಸೆಗಳನ್ನು ತಿಳಿಸುವ ದಾಖಲೆಯಾಗಿದೆ. ಇದು ಒಬ್ಬ ನಂಬಿಗಸ್ಥ ವ್ಯಕ್ತಿಯ ಬಳಿ ಇರಿಸಿರುವ ರಹಸ್ಯ ದಾಖಲೆಯಾಗಿರಬಹುದು ಮತ್ತು ಇದನ್ನು ಮರಣದ ಬಳಿಕ ಬಹಿರಂಗಪಡಿಸಲಾಗುತ್ತದೆ. ಈ ದಾಖಲೆಯಲ್ಲಿ ಅನೇಕ ಸಂಗತಿಗಳನ್ನು ಪ್ರಸ್ತಾಪ ಮಾಡಬಹುದು. ಅವುಗಳಲ್ಲಿ ಈ ಕೆಳಗಿನ ಅಂಶಗಳು ಕೂಡ ಸೇರಿರುತ್ತವೆ:

- **ನಿಮ್ಮ ಆಸ್ತಿ/ಸ್ವತ್ತುಗಳು/ಸ್ವಾಧೀನದಲ್ಲಿ ಇರುವ ವಸ್ತುಗಳನ್ನು ಹೇಗೆ ಹಂಚಿಕೆ ಮಾಡಲಾಗುತ್ತದೆ ಅಥವಾ ಹಸ್ತಾಂತರ ಮಾಡಲಾಗುತ್ತದೆ.**
- **ನಿಮ್ಮ ಯಾರಾದರೂ ಅಪ್ರಾಪ್ತ ಮಕ್ಕಳು/ಅವಲಂಬಿತ ರನ್ನು ಹೇಗೆ ನೋಡಿಕೊಳ್ಳಬೇಕು (ಪೋಷಕರು).**
- **ಅಪ್ರಾಪ್ತರ ಪಾಲನ್ನು ಅವರು ಪ್ರಾಪ್ತ ವಯಸ್ಸಿಗೆ ಬರುವ ತನಕ ಹೇಗೆ ನಿಭಾಯಿಸಬೇಕು?**
- **ನೀವು ಯಾವುದೇ ರೀತಿಯ ಬಾಧ್ಯತೆಗಳನ್ನು ಹೊಂದಿದ್ದೀರಾ ಮತ್ತು ಹೇಗೆ ಇತ್ಯರ್ಥ ಮಾಡಬೇಕು. ಜೊತೆಗೆ ನೀವು ಮಾಡಿರುವ ಸಾಲದ ವಿವರಗಳನ್ನು ಒದಗಿಸುವುದು.**
- **ನಿಮ್ಮ ಮರಣದ ಬಳಿಕ ಹೇಗೆ ಅಂತ್ಯ ಸಂಸ್ಕಾರ ಮಾಡಬೇಕು ಎನ್ನುವ ಬಗ್ಗೆ ಬಯಕೆ.**
- **ನಿಮ್ಮ ಕುಟುಂಬ ಕೈಗೊಳ್ಳಬಹುದಾದ ಯಾವುದೆ ಆಸೆಗಳು ಇವೆಯೇ?**
- **ನಿಮ್ಮ ಕುಟುಂಬ ಯಾವುದನ್ನೂ ಕಳೆದುಕೊಳ್ಳದ ಹಾಗೆ ನಿಮ್ಮ ಎಲ್ಲ ಆಸ್ತಿಗಳು, ಬಾಧ್ಯತೆಗಳು ಇತ್ಯಾದಿಗಳನ್ನು ಒಂದೇ ಕಡೆ ಇಡುವಂತೆ ದಾಖಲಿಸುವುದು.**
- **ನೀವು ಬಿಟ್ಟು ಹೋದ ಆಸ್ತಿಯನ್ನು ನಿಭಾಯಿಸಲು**





ಇರುವ ಷರತ್ತುಗಳು

- ನಿಮ್ಮ ವ್ಯವಹಾರಗಳನ್ನು ನಿಭಾಯಿಸುವ ಪ್ರಮುಖ ವ್ಯಕ್ತಿಗಳ ವಿವರಗಳನ್ನು ಹಂಚಿಕೊಳ್ಳುವುದು.
- ಎಸ್ಟೇಟ್‌ನ ಆಡಳಿತವನ್ನು ನೋಡಿಕೊಳ್ಳಲು ನಿರ್ವಾಹಕನೊಬ್ಬನನ್ನು ನೇಮಕ ಮಾಡುವುದು (ನಿಮ್ಮ ಎಲ್ಲ ಖಾತೆಗಳು ಮತ್ತು ವ್ಯವಹಾರಗಳನ್ನು ನಿಭಾಯಿಸುವುದು).

**ವಿಲ್‌ನಿಂದಾಗುವ ಲಾಭಗಳು:** ವಿಲ್ ಬರೆಯುವುದರಿಂದ ಅನೇಕ ಪ್ರಯೋಜನಗಳಿವೆ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಇದು ನೀವು ವಿಲ್‌ನ್ನು ಹೇಗೆ ಬರೆದಿರುತ್ತೀರಿ ಎನ್ನುವುದರ ಮೇಲೆ ಅವಲಂಬಿತವಾಗಿರುತ್ತದೆ. ಇದರಲ್ಲಿರುವ ಮುಖ್ಯ ಪ್ರಯೋಜನಗಳನ್ನು ಹೀಗೆ ಪಟ್ಟಿ ಮಾಡಬಹುದು:

- ನಿಮ್ಮ ಸಂಪತ್ತು/ಆಸ್ತಿಯನ್ನು ನಿಮ್ಮ ಆಸೆಯಂತೆ ಹಂಚಿಕೆ/ನಿರ್ವಹಣೆ ಮಾಡಲಾಗುತ್ತದೆಯೇ ಹೊರತು ಕಾನೂನು ಪ್ರಕಾರ ಅಲ್ಲ.
- ನಿಮ್ಮ ಆಸ್ತಿಯನ್ನು ಸುಲಭವಾಗಿ, ತ್ವರಿತವಾಗಿ ಮತ್ತು ಅಗ್ಗದಲ್ಲಿ ಇತ್ಯರ್ಥ/ಹಂಚಿಕೆ ಮಾಡುವ ದಾರಿ.
- ಸಂಕಷ್ಟದ ಸಮಯದಲ್ಲಿ ಕಾನೂನಿನ ಕೋಟಲೆಗಳು, ಕಾಗದಪತ್ರಗಳನ್ನು ನಿಭಾಯಿಸುವ ಜಂಜಾಟವನ್ನು ತಪ್ಪಿಸುವುದು. ತ್ವರಿತವಾಗಿ ಇತ್ಯರ್ಥ ಮಾಡುವುದರಿಂದ ನಿಮ್ಮ ಹಣಕಾಸು ಸಮಸ್ಯೆಗಳನ್ನೂ ದೂರಮಾಡುತ್ತದೆ.
- ಕಾನೂನಿನ ವ್ಯಾಪ್ತಿಯಲ್ಲಿ ಬರದೇ ಇರುವವರನ್ನು ಕೂಡ ಫಲಾನುಭವಿಯಾಗಿ ಸೇರಿಸಲು ಅವಕಾಶ. ಹಿಂದು ಉತ್ತರಾಧಿಕಾರಿ ಕಾಯ್ದೆ ಅಡಿಯಲ್ಲಿ ಆಸ್ತಿಯನ್ನು ಪಡೆಯಲು ತಂದೆ ಮಾತ್ರ ಮೊದಲ ದರ್ಜೆಯ ವ್ಯಕ್ತಿಗಳಾಗಿರುವುದಿಲ್ಲ ಎಂಬುದನ್ನು ಗಮನಿಸಬೇಕು.
- ನಿಮ್ಮ ಅವಲಂಬಿತರು, ಅದರಲ್ಲೂ ಮುಖ್ಯವಾಗಿ ವಯಸ್ಸಾದ ಪಾಲಕರು/ಮಕ್ಕಳ ಸುರಕ್ಷತೆ ಮತ್ತು ಭದ್ರತೆಯನ್ನು ಖಾತರಿಪಡಿಸುವುದು.
- ನೀವು ಬಯಸಿರುವ ನಿಮ್ಮ ವ್ಯಾಪಾರವನ್ನು ರಕ್ಷಿಸಿಕೊಳ್ಳುವುದು.
- ನಿಮ್ಮ ಎಲ್ಲ ಖಾತೆಗಳು/ಆಸ್ತಿಗಳು/ಬಾಧ್ಯತೆಗಳ ವಿವರಗಳನ್ನು ಹಂಚಿಕೊಳ್ಳುವುದು.
- ನಿಮ್ಮ ಕುಟುಂಬ ಸದಸ್ಯರ ನಡುವೆ ವಿವಾದ ಮತ್ತು ಸಂಘರ್ಷಗಳನ್ನು ತಪ್ಪಿಸಲು ನೆರವಾಗುತ್ತದೆ.

### ಗಮನಿಸಬೇಕಾದ ಕೆಲವು ವಿಚಾರಗಳು

ಉಯಿಲುಗಳ ಬಗ್ಗೆ ತಿಳಿದುಕೊಳ್ಳಲು ಹೊರಟಾಗ ಈ ಕೆಳಗಿನ ಕೆಲವು ಮಹತ್ವದ ಸಂಗತಿಗಳನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು.

ಒಂದು ವಿಲ್ ಯಾವತ್ತೂ ಮುಕ್ತ ಮನಸ್ಸಿನಿಂದ ಮತ್ತು ಸ್ವಸ್ಥ ಮನಸ್ಸಿನ ಒಬ್ಬ ವಯಸ್ಕ ಸ್ಪಷ್ಟ ಉದ್ದೇಶದಿಂದ ಬರೆದಿರಬೇಕು.

ವಿಲ್‌ನಲ್ಲಿ ಬಳಸಿದ ಭಾಷೆ ಸ್ಪಷ್ಟವಾಗಿರಬೇಕು ಮತ್ತು ಅರ್ಥ ಮಾಡಿಕೊಳ್ಳಲು ಸುಲಭವಾಗಿರಬೇಕು. ಇದರಿಂದ ಯಾವುದೇ ಗೊಂದಲ ಅಥವಾ ವಿವಾದಗಳನ್ನು ತಪ್ಪಿಸಬಹುದು.

ಎಲ್ಲ ಖಾತೆಗಳು, ಸೊತ್ತುಗಳು ಮತ್ತು ಪಕ್ಷಗಳು ಇತ್ಯಾದಿ ವಿವರಗಳನ್ನು ಸ್ಪಷ್ಟವಾಗಿ ಪ್ರಸ್ತಾಪ ಮಾಡಬೇಕು.

ಇದು ಆ ವ್ಯಕ್ತಿಯ ಸ್ವಂತದ ಆಸ್ತಿಯನ್ನು ಮಾತ್ರ ಒಳಗೊಂಡಿರಬೇಕೆ ಹೊರತು ಪಿತ್ರಾರ್ಜಿತ ಅಥವಾ ಆನುವಂಶಿಕವಾಗಿ ಬಂದ ಆಸ್ತಿಯನ್ನು ಒಳಗೊಂಡಿರಬಾರದು.

ಒಂದು ವಿಲ್ ಯಾವುದೇ ಸ್ವರೂಪದಲ್ಲಿ, ಭಾಷೆಯಲ್ಲಿ ಮತ್ತು ಒಂದು ಸಾಮಾನ್ಯ ಕಾಗದದಲ್ಲಿ ಬರೆದುದಾಗಿರಬಹುದು. ಆದಾಗ್ಯೂ, ಅದನ್ನು ಒಂದು ಕಾನೂನಿನ ಸ್ವರೂಪದಲ್ಲಿ ಸಮರ್ಪಕವಾಗಿ ಹಾಗೂ ಎಲ್ಲ ಪ್ರಮಾಣೀಕೃತ ವಿಧಿಗಳನ್ನು ಒಳಗೊಂಡಂತೆ ಬರೆಯುವುದು ಸೂಕ್ತ. ಇದರಿಂದ ಮುಂದಾಗುವ ವಿವಾದಗಳನ್ನು ತಪ್ಪಿಸಬಹುದು. ಇಂತಹ ನಮೂನೆಗಳು ಆನ್‌ಲೈನ್‌ನಲ್ಲಿ ಉಚಿತವಾಗಿ ಲಭ್ಯವಿರುತ್ತದೆ ಮತ್ತು ಈ ಸಂಬಂಧ ಸೇವೆಗಳನ್ನು ಒದಗಿಸಲು ಆನ್‌ಲೈನ್ ವೆಬ್‌ಸೈಟ್ ಕೂಡ ಇದೆ.

ಈ ವಿಲ್‌ಗೆ ಸಾಮಾನ್ಯವಾಗಿ ಇಬ್ಬರು ಸಾಕ್ಷಿಗಳು ಸಹಿ ಹಾಕಬೇಕು. ಇದರಲ್ಲಿ ವಿಲ್‌ನ ಅಡಿಯಲ್ಲಿ ಬರುವ ಫಲಾನುಭವಿಗಳು ಇರಬಾರದು.

ವಿಲ್‌ನ್ನು ನೋಂದಾಯಿಸುವುದು ಕಡ್ಡಾಯವೇನೂ ಅಲ್ಲ, ಆದರೆ ಅಗತ್ಯ. ಇದಕ್ಕೆ ಯಾವುದೇ ಸ್ಟಾಂಪ್ ಡ್ಯುಟಿ ಇರುವುದಿಲ್ಲ ಮತ್ತು ಕೇವಲ ಸಾಂಕೇತಿಕಕ ನೋಂದಣಿ ಶುಲ್ಕ ಇರುತ್ತದೆ.

ಆಸ್ತಿಯಲ್ಲಿ ಯಾವುದೇ ಬದಲಾವಣೆಯಾಗಿದ್ದರೆ ಅಥವಾ ಕುಟುಂಬ ಸಂಯೋಜನೆಯಲ್ಲಿ ಬದಲಾವಣೆ ಆಗಿದ್ದರೆ ಮತ್ತು ಇತ್ಯಾದಿ ವಿವರಗಳನ್ನು ವಿಲ್‌ನಲ್ಲಿ ಹೊಸದಾಗಿ ಸೇರಿಸಬೇಕು. **‘ತಾಜಾಕಲಮು’ ('Codicil')** ಎಂಬ ದಸ್ತಾವೇಜಿನ ಮೂಲಕ ವಿಲ್‌ನಲ್ಲಿ ಬದಲಾವಣೆಯನ್ನು ಮಾಡಬಹುದು, ಇದನ್ನು ಕೂಡ ವಿಲ್‌ನ ಒಂದು ಭಾಗ ಎಂದೇ ಕರೆಯಲಾಗುತ್ತದೆ.


**ಒಟ್ಟಾರೆ:** ಅನೇಕ ಸಂಸ್ಕೃತಿಗಳಲ್ಲಿ ‘ವಿಲ್’ ಒಂದು ನಿಷೇಧಾರ್ಥ ವಿಷಯವಾಗಿ ಹೋಗಿದೆ. ಅದರ ಬಗ್ಗೆ ಮಾತನಾಡಲು ಹಿಂಜರಿಯುತ್ತಾರೆ. ಅಷ್ಟು ಮಾತ್ರವಲ್ಲದೆ ಇದನ್ನೊಂದು ಕೆಟ್ಟ ಶಕುನದ ರೀತಿಯಲ್ಲಿಯೇ ನೋಡಲಾಗುತ್ತದೆ. ಆದರೆ ಒಂದು ವಿಮಾ ಪಾಲಿಸಿಯನ್ನು ಕೊಳ್ಳುವಾಗ ನಾವು ಇದನ್ನು ಯೋಚನೆ ಮಾಡದೇ ಇರುವುದು, ಆಗ ಈ ಪ್ರಶ್ನೆ ಏಳದಿರುವುದು ವಿಷಾದನೀಯ ಅಲ್ಲವೇ? ಇಲ್ಲಿ ಎರಡೂ ಒಂದೇ ಸ್ವರೂಪದವುಗಳು. ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಒಂದು ವಿಲ್ ದಸ್ತಾವೇಜನ್ನು ಯಾವುದೋ ಒಂದು ಕಾನೂನು ದಾಖಲೆಯಾಗಿ ಮಾತ್ರ ನೋಡಬಾರದು. ಇದನ್ನು ನಿಮ್ಮ ಆಸ್ತಿಯ ರೂಪದಲ್ಲಿಯೇ ನೋಡಬೇಕು, ನಿಮ್ಮ ಪ್ರೀತಿಪಾತ್ರರ ಕಡೆಗೆ ನೀವು ತೋರುವ ಪ್ರೀತಿಯ ಅಭಿವ್ಯಕ್ತಿ ಎಂದು ತಿಳಿದುಕೊಳ್ಳಬೇಕು. ನೀವು ಒಂದು ಜೀವ ವಿಮಾ ಪಾಲಿಸಿಯನ್ನು ಕೊಳ್ಳುವ ರೀತಿಯಲ್ಲಿಯೇ ನೀವು ನಿಮ್ಮ ಕುಟುಂಬದ ಕಡೆಗೆ ತೋರುವ ನೈತಿಕ ಜವಾಬ್ದಾರಿ ಎಂದು ನೋಡುವ ಕಾಲ ಇದು. ವಾರಸುದಾರಿಕೆಯ ಯೋಜನೆಯ ಭಾಗವಾಗಿ ಇದನ್ನು ನಿಮ್ಮ ಹಣಕಾಸು ಯೋಜನೆಯ ಅವಿಭಾಜ್ಯ ಅಂಗ ಎಂಬುದಾಗಿ ಪರಿಗಣಿಸಬೇಕು.

**ಅಂತಿಮವಾಗಿ ಒಂದು ಪ್ರಶ್ನೆಯನ್ನು ನಾವು ನಿಮಗೆ ಕೇಳಬೇಕು– ನೀವಿನ್ನೂ ಉಯಿಲನ್ನು ಮಾಡಿಲ್ಲವೇ? ಉಳಿದಿದ್ದನ್ನು ನಿಮ್ಮ ವಿವೇಚನೆಗೆ ಬಿಟ್ಟಿದ್ದು.**

## ವಿಲ್ ಮಾಡದೇ ನಿರ್ಗಮಿಸಿದರೆ....

**ಯಾವುದೇ ಸೂಕ್ತವಾದ ವಿಲ್ ಬರೆದಿಡದೇ ಒಬ್ಬ ವ್ಯಕ್ತಿ ಮೃತಪಟ್ಟರೆ ಕಾನೂನು ತನ್ನದೇ ಆದ ಕ್ರಮವನ್ನು ಕೈಗೊಳ್ಳುತ್ತದೆ ಮತ್ತು ಅದು ನಿಮ್ಮ ಇಷ್ಟಕ್ಕೆ ಅನುಗುಣವಾಗಿ ಇಲ್ಲದೆ ಇರಬಹುದು. ಒಂದು ವೇಳೆ ವಿಲ್ ಬರೆಯದೇ ಹೋದರೆ ಆಸ್ತಿಯನ್ನು ಮೃತಪಟ್ಟವನ ವೈಯಕ್ತಿಕ ಕಾನೂನಿಗೆ ತಕ್ಕಂತೆ ಹಂಚಿಕೆ ಮಾಡಲಾಗುತ್ತದೆ. ಭಾರತೀಯ ವಾರಸುದಾರ ಕಾಯ್ದೆಯು ಭಿನ್ನವಾಗಿದೆ. ಅದು ನಾನಾ ಸಮುದಾಯಗಳಿಗೆ ತಕ್ಕಂತೆ ಭಿನ್ನವಾದ ಕಾನೂನನ್ನು ಹೊಂದಿದೆ. ಅದನ್ನು ಇಲ್ಲಿ ವಿವರವಾಗಿ ನಾವು ತಿಳಿಸಲು ಬಯಸುವುದಿಲ್ಲ. ಆದರೆ ಅದನ್ನು ವಿವರವಾಗಿ ನೋಡುವಂತೆ ನಿಮ್ಮನ್ನು ಉತ್ತೇಜಿಸಲು ಬಯಸುತ್ತೇವೆ. ಯಾಕೆಂದರೆ ಅದನ್ನು ವಿವರವಾಗಿ ಗಮನಿಸಿದಾಗ ಅಚ್ಚರಿಯಾಗಬಹುದು.**

**ಒಂದು ವಿಲ್ ಇಲ್ಲದೇ ಹೋದರೆ ಮೇಲೆ ಪ್ರಸ್ತಾಪ ಮಾಡಿದ ಎಲ್ಲ ಪ್ರಯೋಜನಗಳೂ ಕಳೆದು ಹೋಗಬಹುದು. ವಿಯೋಗದ ಸಂದರ್ಭದಲ್ಲಿ ನಿಮ್ಮ ಆಸ್ತಿಯನ್ನು ಇತ್ಯರ್ಥ ಮಾಡಲು/ ವರ್ಗಾವಣೆ ಮಾಡಲು ನಿಮ್ಮ ಕುಟುಂಬ ಎದುರಿಸುವ ಕಾನೂನಿನ ಬಿಕ್ಕಟ್ಟುಗಳು ಮತ್ತು ಸಮಸ್ಯೆಗಳು ಇನ್ನಷ್ಟು ದುಃಖಕ್ಕೆ ದಾರಿ ಮಾಡಿಕೊಡಬಹುದು. ಒಂದು ವೇಳೆ ಅದು ದೊಡ್ಡ ಕುಟುಂಬವಾಗಿದ್ದರೆ ಆಸ್ತಿಗಳನ್ನು, ವ್ಯಾಪಾರಗಳನ್ನು ಹಂಚಿಕೊಳ್ಳುವ ವಿಚಾರದಲ್ಲಿ ಕುಟುಂಬದಲ್ಲಿ ವಿವಾದಗಳೇ ಹುಟ್ಟಿಕೊಳ್ಳಬಹುದು. ಹಾಗಾಗಿ ಉಯಿಲನ್ನು ಮೊದಲೇ ಬರೆದಿಟ್ಟರೆ ಈ ಎಲ್ಲ ಸಮಸ್ಯೆಗಳನ್ನು ಸುಲಭವಾಗಿ ತಪ್ಪಿಸಲು ಸಾಧ್ಯ.**





# ಸೈಬರ್ ವಿಮೆ

## ಡಿಜಿಟಲ್ ಲೋಕದ ಅನಿವಾರ್ಯ!

ಇಂದು ನಾವು ಸಂಪೂರ್ಣವಾಗಿ ಡಿಜಿಟಲ್ ಜಗತ್ತಿನಲ್ಲಿ ಬದುಕುತ್ತಿದ್ದೇವೆ. ಇದಕ್ಕೆ ಸಂಬಂಧಿಸಿದ ದತ್ತಾಂಶ ಅತ್ಯಂತ ಮೌಲ್ಯಯುತವಾದುದಾಗಿದೆ. ಇಂದು ನಾವು ಎಲ್ಲಿಯೇ ಬದುಕುತ್ತಿದ್ದರೂ ಕೂಡ ತಂತ್ರಜ್ಞಾನವು ನಮ್ಮ ಜೀವನದ ಎಲ್ಲ ಆಯಾಮಗಳಲ್ಲಿಯೂ ತಳಕು ಹಾಕಿಕೊಂಡಿದೆ. ಟ್ರಾಯ್ ಪ್ರಕಾರ ರಾಷ್ಟ್ರದಲ್ಲಿ ಇಂಟರ್‌ನೆಟ್ ಬಳಕೆ ಮಾಡುವವರ ಸಂಖ್ಯೆ 2021ರ ಮಾರ್ಚ್ ಅಂತ್ಯದ ಹೊತ್ತಿಗೆ 825.30 ದಶಲಕ್ಷ ದಾಟಿದೆ. ಚೀನಾದ ಬಳಿಕ ವಿಶ್ವದಲ್ಲಿಯೆ ಅತಿ ಹೆಚ್ಚು ಸಕ್ರಿಯ ಇಂಟರ್‌ನೆಟ್ ಬಳಕೆದಾರರಿರುವುದು ಭಾರತದಲ್ಲಿ. ಕೋವಿಡ್ ಸಾಂಕ್ರಾಮಿಕ ರೋಗದಿಂದಾಗಿ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವವರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಿದೆ. ತಂತ್ರಜ್ಞಾನ ನಾವು ಒಬ್ಬರಿಗೊಬ್ಬರು ಸಂಪರ್ಕದಲ್ಲಿ ಇರುವಂತೆ, ನಮ್ಮ ಜೀವನದ ಗುಣಮಟ್ಟದಲ್ಲಿ ಸುಧಾರಣೆ ತರುವಲ್ಲಿ ಸಹಾಯ ಮಾಡಿದೆ. ಮಾತ್ರವಲ್ಲದೆ ನಾವು ದಿನ ದಿನವೂ ಹೊಸದನ್ನು ಕಲಿಯಲು, ವ್ಯಾಪಾರವನ್ನು ಅಭಿವೃದ್ಧಿಪಡಿಸಲು, ಅಪರಿಮಿತವಾದ ಆನ್‌ಲೈನ್ ಸೇವೆಗಳನ್ನು ಪಡೆಯಲು ಸಹಾಯ ಮಾಡಿದೆ. ಹೀಗೆ ಅನೇಕ ಪ್ರಯೋಜನಗಳು ನಮಗಾಗಿವೆ. ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದರಿಂದ ನಾವು ಹೊಸ ಎತ್ತರಗಳನ್ನು ಕಂಡುಕೊಳ್ಳಲು ಸಾಧ್ಯವಾಗಿದೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ.

### ಸೈಬರ್ ಅಪರಾಧಗಳು ಎಂದರೆ ಏನು?

ಸೈಬರ್‌ಕ್ರೈಮ್ ಎನ್ನುವುದು ಒಂದು ಕ್ರಿಮಿನಲ್ ಚಟುವಟಿಕೆಯಾಗಿದ್ದು ಅದು ಕಂಪ್ಯೂಟರ್, ಕಂಪ್ಯೂಟರ್ ಜಾಲ ಅಥವಾ ನೆಟ್‌ವರ್ಕ್‌ನ ಸಾಧನದ ಮೇಲೆ ಪ್ರಭಾವ ಬೀರಬಹುದು ಅಥವಾ ಅದನ್ನು ಬಳಸಿಕೊಳ್ಳಬಹುದು. ಎಲ್ಲವೂ ಅಲ್ಲದೇ ಹೋದರೂ ಸೈಬರ್ ಅಪರಾಧಿಗಳು ಅಥವಾ ಹ್ಯಾಕರ್‌ಗಳು ಎಸಗುವ ಬಹುತೇಕ ಸೈಬರ್‌ಕ್ರೈಮ್‌ಗಳು ಹಣಕ್ಕೆ ಸಂಬಂಧಿಸಿದ್ದಾಗಿರುತ್ತವೆ. ಇದಕ್ಕೆ ಸಂಬಂಧಿಸಿದ ಅಪರಾಧಗಳು ಖಾತೆಯ ಕಳ್ಳತನ, ಹಗರಣಗಳು, ವಂಚನೆಯ ವ್ಯವಹಾರಗಳು, ಇಮೇಲ್/ಇಂಟರ್‌ನೆಟ್ ವಂಚನೆಗಳು, ದತ್ತಾಂಶಗಳು, ಖಾಸಗಿ ಮಾಹಿತಿಯ ಕಳ್ಳತನ, ಆನ್‌ಲೈನ್ ಕಿರಿಕಿರಿಗಳು, ಸುಲಿಗೆ, ಒತ್ತೆಹಣ ಹೀಗೆ ಪಟ್ಟಿ ಮುಂದುವರಿಯುತ್ತದೆ. ತಂತ್ರಜ್ಞಾನವು ನಮ್ಮ ದಿನನಿತ್ಯದ ಜೀವನದಲ್ಲಿ ನಿರಂತರ ಪ್ರಭಾವ ಬೀರುತ್ತಲೇ ಇರುವುದರಿಂದ ಡಿಜಿಟಲ್ ಅಪರಾಧದ ಮುಖಗಳೂ ನೂರಾರು ರೂಪವನ್ನು ತಳೆಯುತ್ತಿವೆ ಎನ್ನುವುದರಲ್ಲಿ ಅನುಮಾನವಿಲ್ಲ.

### ಸೈಬರ್ ವಿಮೆ ಎಂದರೆ ಏನು?

ಸೈಬರ್ ಅಪರಾಧಗಳಿಂದ ಪಾಲಿಸಿದಾರರನ್ನು ರಕ್ಷಿಸುವ ಉದ್ದೇಶದಿಂದ ವಿನ್ಯಾಸಗೊಳಿಸಲಾಗಿರುವ ವಿಮಾ ಪಾಲಿಸಿಯೇ ಸೈಬರ್ ಇನ್ಶೂರೆನ್ಸ್. ನಿಯಂತ್ರಕರ ಪ್ರಕಾರ ಸೈಬರ್ ವಿಮಾ ಪಾಲಿಸಿಯು ಈ ಕೆಳಗಿನ ಸೌಲಭ್ಯಗಳನ್ನು ಒದಗಿಸುತ್ತದೆ.

### ಫಂಡ್‌ಗಳ ಕಳ್ಳತನ

ವಿಮಾದಾರರ ಬ್ಯಾಂಕ್ ಖಾತೆ, ಕ್ರೆಡಿಟ್ ಅಥವಾ ಡೆಬಿಟ್ ಕಾರ್ಡ್ ಅಥವಾ ಮೊಬೈಲ್ ವ್ಯಾಲೆಟ್‌ಗಳನ್ನು ಮೂರನೇ ವ್ಯಕ್ತಿಯು ಕನ್ನಹಾಕುವುದು ಅಥವಾ ಸೈಬರ್ ಅಪರಾಧ ಎಸಗುವುದರಿಂದ ನಿಮ್ಮ ಫಂಡ್‌ಗಳಿಗೆ ರಕ್ಷಣೆಯನ್ನು ನೀಡುತ್ತದೆ.



### ಮಾಲ್‌ವೇರ್ ಸೌಲಭ್ಯ/ಡಾಟಾ ಮರುಸ್ಥಾಪನೆ ವೆಚ್ಚ

ಮಾಲ್‌ವೇರ್‌ನಿಂದಾಗಿ ಕಳೆದುಕೊಂಡಿರುವ ಡಾಟಾಗಳನ್ನು ಮರುಸ್ಥಾಪನೆಗೆ ತಗಲುವ ವೆಚ್ಚವನ್ನು ಭರಿಸಲಾಗುತ್ತದೆ.

### ಫಿಶಿಂಗ್ ಸೌಲಭ್ಯ

ಫಿಶಿಂಗ್ ಸ್ವರೂಪದ ವಂಚನೆಯಿಂದ ಉಂಟಾದ ಹಣಕಾಸು ನಷ್ಟಗಳಿಗೆ ರಕ್ಷಣೆ ನೀಡುವ ದೃಷ್ಟಿಯಿಂದ ಮತ್ತು ಈ ಕೃತ್ಯದಲ್ಲಿ ತೊಡಗಿದವರ ವಿಚಾರಣೆ ಮತ್ತು ತನಿಖೆಗೆ ಬೇಕಾದ ವೆಚ್ಚಗಳನ್ನು ಭರಿಸಲು.

### ಅನಧಿಕೃತ ಆನ್‌ಲೈನ್ ವಹಿವಾಟು

ಇಂಟರ್‌ನೆಟ್ ಮೂಲಕ ಆನ್‌ಲೈನ್ ಖರೀದಿಯನ್ನು ಮಾಡಲು ಮೂರನೇ ವ್ಯಕ್ತಿಯು ಬ್ಯಾಂಕ್ ಖಾತೆಗಳು, ಕ್ರೆಡಿಟ್ ಕಾರ್ಡ್/ಡೆಬಿಟ್ ಕಾರ್ಡ್, ಇ-ವ್ಯಾಲೆಟ್‌ಗಳನ್ನು ವಂಚಿಸುವ ಪ್ರಕರಣಗಳಲ್ಲಿ ರಕ್ಷಣೆಯನ್ನು ನೀಡುತ್ತದೆ.

### ಇಮೇಲ್ ವಂಚನೆ

ಇಮೇಲ್ ಮೂಲಕ ವಂಚನೆ ಮಾಡಿ ಹಣಕಾಸು ನಷ್ಟಕ್ಕೆ ಕಾರಣವಾಗುವ ಪ್ರಕರಣಗಳಲ್ಲಿ ರಕ್ಷಣೆಯನ್ನು ನೀಡುವುದು ಮತ್ತು ಅಂತಹ ವಂಚಕರನ್ನು ವಿಚಾರಣೆಗೆ, ತನಿಖೆಗೆ ಗುರಿಪಡಿಸಲು ಬೇಕಾದ ವೆಚ್ಚವನ್ನು ಭರಿಸುವ ಸೌಲಭ್ಯ.

### ಮಾಧ್ಯಮ ಬಾಧ್ಯತೆ ಕ್ಲೈಮು

ಯಾವುದೇ ಡಿಜಿಟಲ್ ಮಾಧ್ಯಮದಲ್ಲಿ ವಿಮಾದಾರನು ಮಾಡಿದ ಪ್ರಕಟಣೆ ಅಥವಾ ಪ್ರಸಾರಕ್ಕೆ ಒಳಪಟ್ಟಂತೆ ಖಾಸಗಿತನದ ಅತಿಕ್ರಮಣ ಅಥವಾ ಮಾನನಷ್ಟಕ್ಕೆ ಸಂಬಂಧಿಸಿದಂತೆ ಮೂರನೇ ಪಕ್ಷದವರಲ್ಲಿ ಕ್ಲೈಮ್ ಮಾಡಲು ಬೇಕಾದ ರಕ್ಷಣಾ ವೆಚ್ಚವನ್ನು ಭರಿಸುತ್ತದೆ.

### ಸೈಬರ್ ಸುಲಿಗೆ ಸೌಲಭ್ಯ

ಸೈಬರ್ ಸುಲಿಗೆ ಬೆದರಿಕೆಯ ಹಿನ್ನೆಲೆಯಲ್ಲಿ ಉಂಟಾಗುವ ನಷ್ಟವನ್ನು ಭರಿ ಸುವ ನಿಟ್ಟಿನಲ್ಲಿ ದುಷ್ಕರ್ಮಿಗಳನ್ನು ವಿಚಾರಣೆಗೆ ಗುರಿಪಡಿಸಲು ಅಗತ್ಯವಾದ ವೆಚ್ಚವನ್ನು ಭರಿಸುತ್ತದೆ.

### ಡಾಟಾ ಉಲ್ಲಂಘನೆ ಮತ್ತು ಖಾಸಗಿತನದ ಉಲ್ಲಂಘನೆ ವೆಚ್ಚವನ್ನು ಭರಿಸುವುದು:

ಡಾಟಾ ಉಲ್ಲಂಘನೆ ಮತ್ತು ಅಥವಾ ಖಾಸಗಿತನದ ಉಲ್ಲಂಘನೆಗಾಗಿ ವಿಮಾದಾರರ ವಿರುದ್ಧ ಮೂರನೇಯವರು

### ಗುರುತಿನ ಕಳ್ಳತನದಿಂದ ರಕ್ಷಣೆ

ಈ ಸೌಲಭ್ಯದಲ್ಲಿ ಮೂರನೆಯವರಿಂದ ಗುರುತಿನ ಕಳ್ಳತನದಂತಹ ವಂಚನೆಯಾದಾಗ ವಿಮಾದಾರನು ತನ್ನ ರಕ್ಷಣೆಗೆ ಆಗುವ ಖರ್ಚನ್ನು ಇದರಿಂದ ಭರಿಸಿಕೊಳ್ಳಬಹುದು. ಇಂತಹ ಪ್ರಕರಣದಲ್ಲಿ ದುಷ್ಕರ್ಮಿಗಳನ್ನು ವಿಚಾರಣೆಗೆ ಒಳಪಡಿಸಲು ಹಾಗೂ ಮತ್ತಿತರ ವೆಚ್ಚಗಳನ್ನು ತುಂಬಿಕೊಳ್ಳಲು ಇದು ಸಹಾಯವಾಗುತ್ತದೆ.

### ಸಾಮಾಜಿಕ ಮಾಧ್ಯಮದ ಸೌಲಭ್ಯ/ವೈಯಕ್ತಿಕ ಸಾಮಾಜಿಕ ಮಾಧ್ಯಮ

ವಿಮಾದಾರನ ಸಾಮಾಜಿಕ ಮಾಧ್ಯಮದ ಖಾತೆಗಳ ಕಳ್ಳತನದಿಂದ ಮೂರನೇ ವ್ಯಕ್ತಿಗಳಿಂದ ಉಂಟಾಗುವ ರಕ್ಷಣಾ ವೆಚ್ಚವನ್ನು ಇದರಲ್ಲಿ ಭರಿಸಲಾಗುತ್ತದೆ. ಸಾಮಾಜಿಕ ಮಾಧ್ಯಮದ ಕಳ್ಳತನದಲ್ಲಿ ಶಾಮೀಲಾದವರ ವಿಚಾರಣೆಗೆ ಮತ್ತು ಇತರ ವೆಚ್ಚಗಳನ್ನು ಈ ವಿಮಾ ಸೌಲಭ್ಯದಲ್ಲಿ ಕಲ್ಪಿಸಿಕೊಡಲಾಗುತ್ತದೆ.

### ಸೈಬರ್ ಬೇಟೆ/ಬೆದರಿಕೆ

ಸೈಬರ್ ಜಾಲದ ಮೂಲಕ ಬೆದರಿಕೆಯೊಡ್ಡುವರನ್ನು ವಿಚಾರಣೆಗೆ ಒಳಪಡಿಸಲು ತಗಲುವ ಖರ್ಚನ್ನು ಭರಿಸಲಾಗುತ್ತದೆ.

ಹೂಡಿದ ಕ್ಲೈಮ್‌ನಿಂದ ಆದ ರಕ್ಷಣಾ ವೆಚ್ಚ ಮತ್ತು ಹಾನಿಗಳ ನಷ್ಟವನ್ನು ಭರ್ತಿ ಮಾಡಲು ಸೌಲಭ್ಯ ಒದಗಿಸುವುದು.


ಮೇಲೆ ಪ್ರಸ್ತಾಪ ಮಾಡಿದ ಬಹುತೇಕ ಎಲ್ಲ ರಿಸ್ಕಗಳನ್ನೂ ಉದ್ಯಮದಲ್ಲಿ ಈಗಾಲೇ ಅಸ್ತಿತ್ವದಲ್ಲಿರುವ ನೀತಿಗಳು ಸೌಲಭ್ಯವನ್ನು ಒದಗಿಸುತ್ತಿವೆ ಮತ್ತು ಹೆಚ್ಚುವರಿ ಅಂಶಗಳು/ಭದ್ರತೆಗಳೂ ಇವೆ. ಇವುಗಳಲ್ಲಿ ಪ್ರತಿಷ್ಠಿತ ವಿಷಯಗಳನ್ನು ತೆಗೆದುಹಾಕುವುದು, ಘಟನೆಗಳನ್ನು ಪರಿಹರಿಸಲು ಫೊರೆನ್ಸಿಕ್ ವೆಚ್ಚಗಳು, ಕಾನೂನು ಕ್ರಮಗಳ ವಿರುದ್ಧ ವಾದಿಸಲು ಬೇಕಾದ ವೆಚ್ಚಗಳು ಸೇರಿವೆ.

### ಪಾಲಿಸಿದಾರರ ಜವಾಬ್ದಾರಿಗಳು

ಯಾವುದೇ ವಿಮಾ ಪಾಲಿಸಿಯಲ್ಲಿ ಇರುವಂತೆ ಇಲ್ಲಿಯೂ ಕೂಡ ಪಾಲಿಸಿದಾರರು ಮಾಡಬಹುದಾದ ಮತ್ತು ಮಾಡದೇ ಇರುವ ಕೆಲವು ಸಂಗತಿಗಳನ್ನು ನೆನಪಿಟ್ಟುಕೊಳ್ಳಬೇಕಾಗುತ್ತದೆ. ಪಾಲಿಸಿದಾರ/ಳಾಗಿ ಯಾವುದೇ ಒಂದು ಮಾಹಿತಿ, ಗುರುತು ಅಥವಾ ವ್ಯವಹಾರವನ್ನು ಕಾಯ್ದಿಟ್ಟುಕೊಳ್ಳಲು ಸೂಕ್ತ ಎಚ್ಚರಿಕೆ ಮತ್ತು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಯಾವುದೇ ರೀತಿಯ ಆನ್‌ಲೈನ್ ವಹಿವಾಟನ್ನು ಮಾಡುವ ಸಂದರ್ಭದಲ್ಲಿ ನಿಗಾ ವಹಿಸಬೇಕಾಗುತ್ತದೆ ಮತ್ತು ಯಾರಿಂದಲೇ ಆಗಲಿ ಯಾವುದೇ ವಂಚನೆ ನಡೆದರೆ ಅದನ್ನು ಸಕಾಲದಲ್ಲಿ ಮಾಹಿತಿಯನ್ನು ನೀಡಬೇಕು. ಮಾಹಿತಿಯನ್ನು ರಕ್ಷಿಸಿಕೊಳ್ಳಲು ನಿಮ್ಮ ಕಡೆಯಿಂದ ಯಾವುದೇ ಮುಂಜಾಗೃತಾ ಕ್ರಮಗಳನ್ನು ಕೈಗೊಳ್ಳದೇ ಇದ್ದರೆ ನೀವು ಮಂಡಿಸುವ ಕ್ಲೈಮ್‌ಗಳು ತಿರಸ್ಕೃತಗೊಳ್ಳುವ ಸಾಧ್ಯತೆ ಇರುತ್ತದೆ.

**ಒಟ್ಟಾರೆ:** ಈಗಿನ ಡಿಜಿಟಲ್ ಯುಗದಲ್ಲಿ ನಾವು ಎದುರಿಸುವ ಅಪಾಯಗಳನ್ನು ಮುಂಚಿತವಾಗಿಯೇ ಗುರುತಿಸಬೇಕು. ನಮ್ಮ ಆನ್‌ಲೈನ್‌ನ ಹಾಜರಾತಿಯ ಬಗ್ಗೆ. ನಮ್ಮ ಚಟುವಟಿಕೆಗಳು ಮತ್ತು ನಡವಳಿಕೆಗಳ ಬಗ್ಗೆ ಯಾವತ್ತೂ ಜಾಗೃತರಾಗಿರಬೇಕು. ನಾವು ನಮ್ಮ ಸುತ್ತ ನಡೆಯುವ ಸೈಬರ್ ಅಪರಾಧದ ವಿಧಗಳ ಬಗ್ಗೆ ಹೆಚ್ಚು ಹೆಚ್ಚು ತಿಳಿದುಕೊಳ್ಳುತ್ತಾ ಮತ್ತು ಅವನ್ನೆಲ್ಲ ನಾವು ಸಾಧ್ಯವಾದಷ್ಟು ತಪ್ಪಿಸುತ್ತ ಹೋಗಬೇಕು. ಇವೆಲ್ಲ ಇದ್ದೂ ಕೂಡ ನೀವು ಸೈಬರ್ ಅಪರಾಧದ ಭಾಗವಾಗಿದ್ದರೆ ಮತ್ತು ಅದಕ್ಕೆ ಬಲಿಪಶುವಾಗಿದ್ದರೆ ಸೈಬರ್ ವಿಮೆಗೆ ನಿಮಗೆ ಹೆಚ್ಚುವರಿಯಾದ ಭದ್ರತೆಯನ್ನು ಒದಗಿಸುತ್ತದೆ. ಈ ಕ್ಷೇತ್ರದಲ್ಲಿ ಈಗಾಗಲೇ ಕೆಲವು ಉತ್ತಮ ಭದ್ರತಾ ಯೋಜನೆಗಳಿವೆ. ನಿಮ್ಮ ಅಗತ್ಯಗಳಿಗೆ ತಕ್ಕಂತೆ ಇವುಗಳಲ್ಲಿ ಯಾವುದನ್ನಾದರೂ ನೀವು ಆಯ್ಕೆ ಮಾಡಿಕೊಳ್ಳಬಹುದು. ನಾವು ನಮ್ಮ ದಿನನಿತ್ಯದ ಬದುಕಿನಲ್ಲಿ ಡಿಜಿಟಲ್ ಮೂಲಕ ಸಕ್ರಿಯರಾಗಿದ್ದರೆ ಮತ್ತು ತಂತ್ರಜ್ಞಾನವನ್ನು ನಂಬಿಕೊಂಡಿದ್ದರೆ ಸೈಬರ್ ವಿಮಾ ಪಾಲಿಸಿಯನ್ನು ನೀವು ಇಂದಿನ ಅಗತ್ಯವೆಂದೇ ಪರಿಗಣಿಸಬೇಕಾಗಿದೆ.

# ಮ್ಯೂಚುಯಲ್ ಫಂಡ್ ಹೂಡಿಕೆಗೆ ಪ್ರತಿಯಾಗಿ ಸಾಲ




**ಪ್ರಶ್ನೆ:** ಒಂದು ಸಾಲದ ಅವಧಿಯನ್ನು ಹೆಚ್ಚಿಸಬಹುದೇ. ಅಂದರೆ, ಎಲ್‌ಎಎಸ್ ಅವಧಿ ಸಾಲದಲ್ಲಿ 12 ತಿಂಗಳ ಅವಧಿಯ ಸಾಲವನ್ನು 18 ತಿಂಗಳಿಗೆ ಅಥವಾ 24 ತಿಂಗಳ ಸಾಲವನ್ನು 36 ತಿಂಗಳಿಗೆ ಪರಿವರ್ತಿಸಲು ಸಾಧ್ಯವೇ?

**ಉತ್ತರ:** ಸಾಧ್ಯವಿಲ್ಲ. ಒಮ್ಮೆ ಸಾಲವನ್ನು ವಿತರಣೆ ಮಾಡಿದ ಬಳಿಕ ಅದರ ಅವಧಿಯನ್ನು ಬದಲಿಸಲು ಸಾಧ್ಯವಿಲ್ಲ.

**ಪ್ರಶ್ನೆ:** ಎಲ್‌ಎಎಸ್ ಅವಧಿ ಸಾಲದ ಅರ್ಜಿಯನ್ನು (ಸಾಲ ವಿತರಣೆಗೆ ಮುನ್ನ) ರದ್ದುಗೊಳಿಸಲು ಅರ್ಜಿದಾರನು ಹೇಗೆ ಮನವಿ ಮಾಡಿಕೊಳ್ಳಬಹುದು?

**ಉತ್ತರ:** ಎ) ಸೆಕ್ಯುರಿಟಿಗಳನ್ನು ಒತ್ತೆ ಇಟ್ಟ ಬಳಿಕ ಮತ್ತು ಸಾಲದ ಖಾತೆಯ ಸಂಖ್ಯೆಯನ್ನು ಸೃಷ್ಟಿಸಿದ ಬಳಿಕ ಎಲ್‌ಎಎಸ್ ಅವಧಿ ಸಾಲದ ಅರ್ಜಿ:

ಈ ಹಂತದಲ್ಲಿ ಅರ್ಜಿಯನ್ನು ರದ್ದು ಮಾಡಲು ಅರ್ಜಿದಾರನು ಇ–ವೆಲ್ತ್ ಡೆಸ್ಕ್‌ನಲ್ಲಿ ಪ್ರಶ್ನೆಯನ್ನು ಕೇಳಬೇಕು:

ಇ–ವೆಲ್ತ್ ಡೆಸ್ಕ್>> ಹೆಲ್ಪ್ ಮತ್ತು ಸಪೋರ್ಟ್>> ಪ್ರಶ್ನೆಯನ್ನು ಕೇಳಿ: (ಪ್ರಶ್ನೆಯ ವಿಧಾನ: ಸೆಕ್ಯುರಿಟಿಗೆ ಪ್ರತಿಯಾಗಿ ಸಾಲ/(ಎಲ್‌ಎಎಸ್)ಕ್ಕೆ ಸಂಬಂಧಿಸಿ>> ಪ್ರಶ್ನೆಯ ಉಪವಿಧಾನ: ಸಾಲ ರದ್ದತಿಗೆ ಮನವಿ[ಸಾಲ ವಿತರಣೆಗೆ ಮುನ್ನ] ಮನವಿಯನ್ನು ಸಲ್ಲಿಸುವುದು).

ಬಿ) ಸೆಕ್ಯುರಿಟಿಗಳನ್ನು ಒತ್ತೆ ಇಡದೇ ಇದ್ದ ಮತ್ತು ಸಾಲದ ಖಾತೆಯ ಸಂಖ್ಯೆಯನ್ನು ಸೃಷ್ಟಿಸುವುದಕ್ಕೆ ಮುಂಚಿತದ ಸಂದರ್ಭದ ಎಲ್‌ಎಎಸ್ ಅವಧಿ ಸಾಲದ ಅರ್ಜಿ:

ಸಾಲವನ್ನು ರದ್ದು ಮಾಡಲು ಕೋರಿ loanservices@njgroup.in ಇದಕ್ಕೆ ಅರ್ಜಿದಾರನು ಮೇಲ್ ಮಾಡಬೇಕು.

**ವಿಷಯ:** ಯುಸಿಸಿಗೆ ವಿತರಣೆ ಮಾಡುವುದಕ್ಕೆ ಮುಂಚಿತವಾಗಿ ಸಾಲವನ್ನು ರದ್ದುಪಡಿಸಲು ಮನವಿ:

ಹೆಸರು:

ಯುಸಿಸಿ:

ಲ್ಯಾನ್ ಸಂ.:

ಸಾಲ ರದ್ದು ಮಾಡಲು ಕಾರಣಗಳು



**ಪ್ರಶ್ನೆ:** ಗ್ರಾಹಕರ ಸಾಲದ ಅರ್ಹತೆಯನ್ನು ಪಾಲುದಾರರು ನೋಡಬಹುದೇ?

**ಉತ್ತರ:** ಸದ್ಯದ ಮಟ್ಟಿಗೆ ಪಾಲುದಾರರ ಡೆಸ್ಕ್‌ನಲ್ಲಿ ಈ ಸೌಲಭ್ಯವು ಲಭ್ಯವಿಲ್ಲ.

ಇನ್‌ಸ್ಪೈರ್ ಇಂಡಿಯಾ ವೆಲ್ತ್ ಪ್ರೈವೇಟ್ ಲಿ.

(ARN–79020)

ಎಎಂಎಫ್ಐ ನೋಂದಾಯಿತ ಮ್ಯೂಚುಯಲ್ ಫಂಡ್ ವಿತರಕರು

ನಮ್ಮ ಸಂಪರ್ಕ: 9148319207, 080–42129917

ಇ–ಮೇಲ್: Mail: info@inspireindiafs.com

ವಿಳಾಸ

INSPIRE INDIA WEALTH PVT LTD
@ 65, 'Surasa Enclave'
1st Floor, Puttanna Road,
Gandhi Bazar, Basavanagudi
Bengaluru-560004

ನಮ್ಮ ಸೇವೆಗಳು

1. ಮ್ಯೂಚುಯಲ್ ಫಂಡ್ಸ್
2. ಸ್ಟಾಕ್ ಬ್ರೋಕಿಂಗ್
3. ವಿಮೆ
4. ಪ್ರಾಪರ್ಟಿ ಇನ್ವೆಸ್ಟ್‌ಮೆಂಟ್ಸ್
5. ತೆರಿಗೆ ಉಳಿತಾಯ ಬಾಂಡ್ ಗಳು
6. ಫೈನಾನ್ಸಿಯಲ್ ಕನ್ಸಲ್ಟಿಂಗ್ & ಪ್ಲಾನಿಂಗ್
7. ವೆಲ್ತ್ ಮ್ಯಾನೇಜ್ಮೆಂಟ್
8. ಹಣಕಾಸು ಮೌಲ್ಯಮಾಪನ
9. ತೆರಿಗೆ ಸಲ್ಲಿಕೆ
10. ವಿಲ್ ಬರವಣಿಗೆ

### ಡಿಸ್ಕ್ಲೈಮರ್

ಈ ವಾರ್ತಾಪತ್ರದ ಸಂಕಲನ ಮಾಡುವ ಸಂದರ್ಭದಲ್ಲಿ ನಾವು ಎಲ್ಲ ರೀತಿಯ ಕಾಳಜಿ ಮತ್ತು ಎಚ್ಚರಿಕೆಯನ್ನು ವಹಿಸಿರುತ್ತೇವೆ. ಇಲ್ಲಿನ ಮಾಹಿತಿಗಳನ್ನು ಹಲವು ನಂಬಿಕೆಗೆ ಅರ್ಹವಾದ ಮೂಲಗಳಿಂದ ಪಡೆದಿರುತ್ತೇವೆ. ಆದರೆ, ಯಾವುದೇ ಮಾಹಿತಿಯ ಖಚಿತತೆ, ಅರ್ಹತೆ ಅಥವಾ ಪರಿಪೂರ್ಣತೆಯ ಬಗ್ಗೆ ಖಾತರಿಯನ್ನು ನೀಡುವುದಿಲ್ಲ. ಹಾಗಾಗಿ ಇಂತಹ ಮಾಹಿತಿ ಬಳಕೆಯಿಂದ ಆಗಬಹುದಾದ ಯಾವುದೇ ದೋಷ ಅಥವಾ ಲೋಪಗಳಿಗೆ ಜವಾಬ್ದಾರರಾಗಿರುವುದಿಲ್ಲ. ಈ ವಾರ್ತಾಪತ್ರದಲ್ಲಿ ತಿಳಿಸಲಾದ, ಚರ್ಚಿಸಲಾದ ಅಥವಾ ಶಿಫಾರಸು ಮಾಡಲಾದ ಯಾವುದೇ ಯೋಜನೆಗಳಿಗೆ ಸಂಬಂಧಿಸಿದಂತೆ ಹೂಡಿಕೆಯನ್ನು ಮಾಡುವ ಸಮರ್ಪಕತೆಯ ಬಗ್ಗೆ ಹೂಡಿಕೆದಾರರು ಸೂಕ್ತವಾದ ಹಣಕಾಸು ಸಲಹೆಗಳನ್ನು ಪಡೆಯಬೇಕು ಮತ್ತು ಭವಿಷ್ಯದ ನಿರೀಕ್ಷೆಗಳ ಬಗ್ಗೆ ನೀಡಿರುವ ಹೇಳಿಕೆಗಳು ಕಾರ್ಯರೂಪಕ್ಕೆ ಬರಬಹುದು ಅಥವಾ ಬಾರದೇ ಇರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮ್ಯೂಚುಯಲ್ ಫಂಡ್ ಹೂಡಿಕೆಗಳು ಯಾವತ್ತೂ ಮಾರುಕಟ್ಟೆಗೆ ಸಂಬಂಧಿಸಿದ ಅಪಾಯದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಹಾಗಾಗಿ ಹೂಡಿಕೆಯನ್ನು ಮಾಡುವುದಕ್ಕೂ ಮುನ್ನ ನಿಮಗೆ ನೀಡಲಾದ ದಾಖಲೆಗಳನ್ನು ದಯವಿಟ್ಟು ಅತ್ಯಂತ ಎಚ್ಚರಿಕೆಯಿಂದ ಓದಿಕೊಳ್ಳಿ. ಹಿಂದಿನ ನಿರ್ವಹಣೆಯು ಕೇವಲ ಸೂಚಕ ಉದ್ದೇಶವನ್ನು ಹೊಂದಿದ್ದು ಅದು ಯಾವುದೇ ಕಾರಣಕ್ಕೂ ಭವಿಷ್ಯಕ್ಕೆ ಮಾರ್ಗದರ್ಶಕವಾಗಿರುವುದಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕು.